ಆ) ಸಣ್ಣಪುಟ್ಟ ಪ್ರಮಾಣಗಳಲ್ಲಿ ಹಾಲುಮಡ್ಡಿ ಕಳ್ಳಸಾಗಾಣಿಕೆ ಮಾಡುವ ಪ್ರಯತ್ನಗಳನ್ನು ನಡೆಸಿದ್ದು ಈ ಪ್ರಕರಣಗಳಲ್ಲಿ ಇಲಾಖಾ ಸಿಬ್ಬಂದಿಯವರು ಹಾಲುಮಡ್ಡಿ ಕಳ್ಳಸಾಗಣಿಕೆಯಾಗುವುದನ್ನು ತಪ್ಪಿಸಿರುವುದರಿಂದ ನಷ್ಟ ಉಂಟಾಗಿರುವುದಿಲ್ಲ.

ಇ) ಹಾಲುಮಡ್ಡಿಯ ಗುತ್ತಿಗೆಯನ್ನು ಹರಾಜು ಮಾಡಿದರೆ, ಹಾಲುಮಡ್ಡಿ ಸಂಗ್ರಹಣೆಗಾಗಿ ಗುತ್ತಿಗೆದಾರರು ಕಾಡಿನ ಒಳಗೆ ಹೋಗಿ ಕೆಲಸ ಮಾಡಬೇಕಿದ್ದು ಈ ಸಂದರ್ಭದಲ್ಲಿ ಬಲಿಯದ ಎಳಸು ಹಾಲುಮಡ್ಡಿ ಮರಗಳಿಂದ ಹಾಲು ಇಳಿಸುವುದರ ಜೊತೆಗೆ ಬೇರೆ ಮರ ಗಿಡಗಳಿಗೆ ಹಾನಿ ಉಂಟಾಗುವ ಸಂಭವವಿರುತ್ತದೆ. ಈ ಹಿನ್ನಲೆಯಲ್ಲಿ ಹಾಲುಮಡ್ಡಿ ಸಂಗ್ರಹಣೆಯನ್ನು 5 ವರ್ಷದವರೆಗೂ ರದ್ದು ಪಡಿಸಿ ಹಾಲುಮಡ್ಡಿ ಮರಗಳನ್ನು ರಕ್ಷಿಸಲಾಗುತ್ತಿದೆ.

ಈ) ಈಗಾಗಲೇ ಆದೇಶ ಸಂಖ್ಯೆ : ಎಹೆಚ್‌ಎಫ್‌ಎಫ್ 188 ಎಫ್‌ಡಿಪಿ 91 ದಿನಾಂಕ 30-10-91ರ ಆದೇಶದ ಮೂಲಕ 5 ವರ್ಷಗಳ ಕಾಲಕ್ಕೆ ಹಾಲುಮಡ್ಡಿ ಸಂಗ್ರಹಣಾ —ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.

ಕುಂದಾಪುರ ತಾಲ್ಲೂಕಿನ ಜೂನಿಯರ್ ಕಾಲೇಜು ಹಾಗೂ ಪ್ರೌಢಶಾಲೆಗಳಲ್ಲಿ ಉಪನ್ಯಾಸಕರ ಮತ್ತು ಅಧ್ಯಾಪಕರ ಹುದ್ದೆಗಳ ಭರ್ತಿ

324 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನ ಜೂನಿಯರ್ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ಕೊರತೆ ಇರುವ ಉಪನ್ಯಾಸಕರ ಹಾಗೂ ಅಧ್ಯಾಪಕರ ಸಂಖ್ಯೆ ಎಷ್ಟು? (ವಿಷಯ ಮತ್ತು ಜೂನಿಯರ್ ಕಾಲೇಜು ಮತ್ತು ಪ್ರೌಢಶಾಲೆಗಳ ವಿವರಗಳನ್ನು ಒದಗಿಸುವುದು)

ಆ) ಈ ಕೊರತೆಯನ್ನು ಎಂದು ತುಂಬಲಾಗುವುದು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕುಂದಾಪುರ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳು : 22

ಸ್ಥಳ	ವಿಷಯ	ಖಾಲಿ ಹುದ್ದೆಗಳ ಸಂಖ್ಯೆ
1) ಕುಂದಾಪುರ	1) ಹಿಂದಿ	1
	2) ಭೌತಶಾಸ್ತ್ರ	1
2) ಶಂಕರನಾರಾಯಣ	1) ಹಿಂದಿ	1
3) ತೆಕ್ಕಟ್ಟೆ	1) ಅರ್ಥಶಾಸ್ತ್ರ	1
4) ನಾವುಂದ	1) ಹಿಂದಿ	1
	2) ವಾಣಿಜ್ಯ ಶಾಸ್ತ್ರ	1
	3) ಗಣಿತಶಾಸ್ತ್ರ	1
5) ಉಪ್ಪುಂದ	1) ಅರ್ಥಶಾಸ್ತ್ರ	1
	2) ರಾಜ್ಯಶಾಸ್ತ್ರ	1

6) ವಂಡ್ಸೆ	1) ಅರ್ಥಶಾಸ್ತ್ರ	1
	2) ವಾಣಿಜ್ಯಶಾಸ್ತ್ರ	1
7)ಕೋಟೇಶ್ವರ	1) ಗಣಿತಶಾಸ್ತ್ರ	1
8) ಕಂಬದಕೋಟಿ	1) ಸಮಾಜಶಾಸ್ತ್ರ	1
	2) ರಾಜ್ಯಶಾಸ್ತ್ರ	1
9) ಬೈಂದೂರು	1) ಹಿಂದಿ	1
	2) ಆಂಗ್ಲಭಾಷೆ	1@TAB =
	4) ಅರ್ಥಶಾಸ್ತ್ರ	1
	5) ಸಮಾಜಶಾಸ್ತ್ರ	1
	6) ಗಣಿತಶಾಸ್ತ್ರ	1
	7) ಜೀವಶಾಸ್ತ್ರ	1
10) ಬಿದ್ಕಲ್ ಕಟ್ಟೆ	1) ರಸಾಯನಶಾಸ್ತ್ರ	1

ಕುಂದಾಪುರ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳು : 57

1)	ಮುಖ್ಯ ಶಿಕ್ಷಕರು	6
2)	ಕಲಾ ಶಿಕ್ಷಕರು	5
3)	ವಿಜ್ಞಾನ	9
4)	ಗಣಿತ	7
5)	ಕನ್ನಡ	5
6)	ಹಿಂದಿ	2
7)	ದೈಹಿಕ ಶಿಕ್ಷಕರು ಗ್ರೇಡ್-1	6
8)	ವೃತ್ತಿ ಶಿಕ್ಷಕರು	17
	ಒಟ್ಟು	57

ಅ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ 864 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ಮಾಡಲಾಗಿದೆ. ಕರ್ನಾಟಕ ಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದ ತಕ್ಷಣ ಈ ಖಾಲಿಯಿರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಅಧ್ಯಾಪಕರ ಹುದ್ದೆಗಳನ್ನು ನೇಮಕಾತಿ ಆದಷ್ಟು ಶೀಘ್ರದಲ್ಲಿ ತುಂಬಲು ಕ್ರಮಕೈಗೊಳ್ಳಲಾಗುವುದು.